◆ **ನಿಮ್ಮ ಇತ್ತೀಚಿನ ಕೃತಿ, 'ಅನುಶ್ರೇಣಿ—ಯಾಜಮಾನಿಕೆ' ಇದೇ ತಾತ್ವಿಕತೆಯ ಮುಂದುವರಿಕೆ. ಭಕ್ತಿ ಕೂಡ ಯಾಜಮಾನಿಕೆಯ ಏಣಿಯಾಗಿ ಬಳಕೆಯಾಗುವುದನ್ನು ಅನಾವರಣ ಮಾಡುವುದು ಇದರ ಗುರಿ. ನಮ್ಮ ಶ್ರೇಣೀಕೃತ ವ್ಯವಸ್ಥೆ ಭಕ್ತಿಯಂಥ ಅಮೂರ್ತ, ಏಕಾಂತದ ಸಂಗತಿಯನ್ನೂ ಬಂಡವಾಳವಾಗಿಸಿಕೊಳ್ಳಬಲ್ಲ ರಾಕ್ಷಸ ಶಕ್ತಿಯನ್ನು ಹೊಂದಿದೆ. ಇದನ್ನು ಕುರಿತ ಆಳವಾದ ಅಧ್ಯಯನದ ಫಲ ಈ ಕೃತಿ. ಕೊನೆಯಿಲ್ಲದ ವಿಷಾದ ಮತ್ತು ವ್ಯಗ್ರತೆ ಈ ಕೃತಿಯುದ್ದಕ್ಕೂ ಕಾಣುತ್ತದೆ .ಇದರ ಬಗ್ಗೆ ಸ್ವಲ್ಪ ಹೇಳಿ.**

ಮೂಲತಃ ವೈದಿಕ ಭಕ್ತಿಯ ಪರಿಕಲ್ಪನೆ ಶೂದ್ರರನ್ನ, ಮಹಿಳೆಯರನ್ನ ಒಳಗೊಳ್ಳಲು ನಿರಾಕರಿಸುತ್ತದೆ. ಭಕ್ತಿ ಪಂಥವಾದರೂ ರೂಪುಗೊಂಡದ್ದು ನಮ್ಮ ವರ್ಣ ವ್ಯವಸ್ಥೆಯ ಆಧಾರದ ಮೇಲೆಯೇ. ವೈದಿಕ ಭಕ್ತಿಯು ಬೌದ್ಧಿಕತೆಯ ನೆಲೆಯನ್ನು ಎತ್ತಿ ಹಿಡಿಯುತ್ತದೆ, ಆದ್ದರಿಂದಲೇ ಅದಕ್ಕೆ ಭಗವದ್ಗೀತೆಯ ಆವಶ್ಯಕತೆಯಿದೆ. ಆದರೆ ಅವೈದಿಕ ಭಕ್ತಿಯು ಭಾವುಕತೆಯ ನೆಲೆಯದ್ದು. ಇದೇ ಮುಂದುವರೆದು ತಂತ್ರದ ಸ್ವರೂಪವನ್ನು ಪಡೆಯಿತು. ವೈದಿಕ ಭಕ್ತಿಯು 'ಏಕಸಂಸ್ಕೃತಿ'ಯನ್ನು ಪ್ರತಿಪಾದಿಸುತ್ತದೆ. ಆದರೆ ಅವೈದಿಕ ಭಕ್ತಿಯು ಬಹುಸಂಸ್ಕೃತಿಯನ್ನು ಒಪ್ಪುವುದರ ಮೂಲಕ ಜನಪರವೂ ಜನತಾಂತ್ರಿಕವೂ ಆಗುತ್ತದೆ. ಏಕಸಂಸ್ಕೃತಿಯ ಸರ್ವಾಧಿಕಾರತ್ವವನ್ನು ಅವೈದಿಕ ಭಕ್ತಿಯು ಒಡೆಯುತ್ತದೆ. ಆದ್ದರಿಂದಲೇ ಅವೈದಿಕ ಭಕ್ತಿ ಪಂಥಗಳನ್ನು ವೈದಿಕ ಪರಂಪರೆ ತನ್ನ ನಿಯಂತ್ರಣಕ್ಕೆ ತಂದುಕೊಳ್ಳಲು ಬಯಸುತ್ತದೆ.

◆ **ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು – ನಿಮ್ಮ ಪ್ರಮುಖ ಲೇಖನಗಳಲ್ಲಿ ಒಂದು. ನಿಮ್ಮ ಓರಗೆಯವರು ಈ ಬಗ್ಗೆ ಆಲೋಚನೆಯ ಮಾಡದೇ ಇದ್ದಾಗ, ನೀವು ಇಂಥ ಲೇಖನ ಬರೆದಿರಿ...**

ನಾನು ಹೇಳಿದ ಹಾಗೆ ನಮ್ಮ ಮನೇನೇ ಒಂದು ಸ್ತ್ರೀವಾದಿ ಕೇಂದ್ರ, ರೇಡಿಯೊ ಹೌಸ್ ಅನ್ನಬಹುದಿತ್ತು. ಹೆಂಗಸರ ಎಲ್ಲ ಬಗೆಯ ಸಮಸ್ಯೆಗಳೂ ಅಲ್ಲಿ ಚರ್ಚೆಗೆ ಬರ್ತಾ ಇದ್ದವು. ಅಲ್ಲಿಂದ ಮುಂದೆ ಸಾಹಿತ್ಯ ಓದುವಾಗ ಅಲ್ಲೂ ಇದೇ ಮುಂದುವರಿದಿರುವ ಹಾಗೆ ಕಾಣಿಸಿತು. ಕೊನೆ ಇಲ್ಲದ ದುಃಖ, ಅನ್ಯಾಯಗಳನ್ನು ಅವರು ತಮ್ಮ ಪಾಪದ ಫಲ ಅನ್ನುವ ಹಾಗೆ ಅನುಭವಿಸುವುದನ್ನು ನೋಡಿ ನನಗೆ ಸಾಹಿತ್ಯದಲ್ಲಿಯೂ ಹೆಣ್ಣಿಗೆ ಸಾಮಾಜಿಕವಾದ ಗೌರವವನ್ನು ಕೊಟ್ಟಿಲ್ಲವಲ್ಲ ಅನಿಸಿತು. ಆಮೇಲೆ ಲೇಖಕಿಯರು ಬಂದರು. ಅವರಲ್ಲಿಯೂ ನನಗಿರುವ ಒಂದು ಸಮಸ್ಯೆ ಅಂದರೆ, ಧಾರ್ಮಿಕವಾದ ಸ್ಥಾನಮಾನ ಇಲ್ಲದೇ ಇರುವುದೇ ಹೆಣ್ಣಿನ ಸಮಸ್ಯೆಗಳ ಮೂಲ ಅನ್ನಿಸುತ್ತೆ ನನಗೆ. ಆದರೆ ಅನೇಕ ಸಲ ಲೇಖಕಿಯರು ಲೈಂಗಿಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಹಾಗೆ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುವುದಿಲ್ಲ. ಇದು ಸಿಕ್ಕದೇ ಭಾರತದ ಸಮಾಜದಲ್ಲಿ ನಿಜವಾದ ಅರ್ಥದಲ್ಲಿ ಹೆಣ್ಣಿನ ಸ್ಥಾನಮಾನದಲ್ಲಿ ಬದಲಾವಣೆಯಾಗುತ್ತೆ ಅನ್ನಿಸುವುದಿಲ್ಲ. ಪ್ರಾರಂಭದಲ್ಲಿ ಲೇಖಕಿಯರೂ ಲೇಖಕರ ಹಾಗೇ ಬರೆಯುವುದಕ್ಕೆ ಪ್ರಯತ್ನ ಪಟ್ಟರು. ದಲಿತ, ಬಂಡಾಯ ಸಾಹಿತ್ಯದಲ್ಲೂ ಹೆಣ್ಣಿನ ಪ್ರಶ್ನೆಗಳು Counter ಆಗಿ ಮಾತ್ರ ಬಂದವು.

◆ **ನವ್ಯ ಸಾಹಿತ್ಯದ ಕಟು ವಿಮರ್ಶಕರು ನೀವು...**

ವೈಯಕ್ತಿಕವಾಗಿ ನಾನು, ಸಾಹಿತ್ಯಕ್ಕಿಂತ ಸಾಮಾಜಿಕ ಬದುಕು ಮುಖ್ಯ ಎಂದು ನಂಬಿದವನು. ನವೋದಯದವರು ಆದರ್ಶವೊಂದನ್ನು ಹಿಂಬಾಲಿಸಿ ಹೊರಟವರು. ಆದರೆ ನವ್ಯರಿಗೆ ಆತ್ಮರತಿಯೇ ಕೇಂದ್ರವಾಯಿತು. ಅವರ ಬದುಕು ಮತ್ತು ಬರವಣಿಗೆಯ ನಡುವಿನ ಕಂದಕ ನನ್ನನ್ನು ಯಾವಾಗಲೂ ಕಾಡಿದೆ. ನೈತಿಕತೆಯಿಲ್ಲದ ಬದುಕು, ಬರವಣಿಗೆಯ ಬಗ್ಗೆ ನನಗೆ ಗೌರವವಿಲ್ಲ.